ಸೋಮವಾರಪೇಟೆ ನಗರದಲ್ಲಿ ಕುಡಿಯುವ ನೀರಿನ ಅಭಾವ.

2304(3125) ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಸೋಮವಾರಪೇಟೆ ನಗರದಲ್ಲಿ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಸೋಮವಾರಪೇಟೆ ಪಟ್ಟಣಕ್ಕೆ ಹಾರಂಗಿ ಜಲಾಶಯದಿಂದ ಕುಡಿಯುವ ನೀರಿನ ಸರಬರಾಜುಗಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ವಿಭಾಗ ಹಾಸನ ಇವರಿಗೆ ರೂ. 60,000.00ಗಳನ್ನು ಸರ್ವೆ ಕಾರ್ಯಕ್ಕಾಗಿ ಪಾವತಿ ಮಾಡಿರುವುದು ನಿಜವೇ?

3. ಈ ಕಾಮಗಾರಿ ಯಾವಾಗ ಪ್ರಾರಂಭ ಮಾಡಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು ವಿವರಣೆ ನೀಡುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :—

1. ಬಂದಿದೆ

2. ಹೌದು, ನಿಜ

3. ಪಟ್ಟಣಕ್ಕೆ ಹಾರಂಗಿ ಜಲಾಶಯದಿಂದ ನೀರು ಪೂರೈಸಲು ಯೋಜನಾ ಸಾಧ್ಯತಾ ವರದಿಯನ್ನು (ಫ್ರಿಲಿಮಿನರಿ ಫೀಸಬಲಿಟಿ ರಿಪೋರ್ಟ್) ಇನ್ನು ಎರಡು ತಿಂಗಳಲ್ಲಿ ತಯಾರಿಸಲಾಗುವುದು, ಇದಕ್ಕೆ ಅನುಮೋದನೆ ನೀಡಿದ ನಂತರ ಕಾಮಗಾರಿಗಳನ್ನು ಪ್ರಾರಂಭಿಸಿ ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಲಾಗುವುದು.

ಹಾರಂಗಿ ನೀರಾವರಿ ಯೋಜನೆಯ ನಾಲಾ ನೀರು ಬಿಡಲು ಗೇಟ್‌ಗಳ ಅಳವಡಿಕೆ.

2305(3126) ಶ್ರೀ ಅಪ್ಪಚ್ಚುರಂಜನ್ ಎಂ.ಪಿ. (ಸೋಮವಾರಪೇಟೆ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಹಾರಂಗಿ ನೀರಾವರಿ ಯೋಜನೆಯಲ್ಲಿ ನಾಲೆಯ ನೀರು ಬಿಡಲು ಎಷ್ಟು ಹೊಸ ಗೇಟುಗಳನ್ನು ಅಳವಡಿಸಲಾಗಿದೆ? ರೋಪ್‌ಗಾಗಿ ಎಷ್ಟು ಹಣ ವೆಚ್ಚ ಮಾಡಲಾಗಿದೆ. (ವಿವರ ನೀಡುವುದು)

ಆ. ಈ ಕಾಮಗಾರಿ ಯಾವ ಹಂತದಲ್ಲಿದೆ?